ಸ್ವಾಧೀನವಾಗಿರುತ್ತದೆ ಉಳಿದಂತೆ 01 ಎಕರೆ 18 ಗುಂಟೆ ಜಮೀನು ಭೂ ಪರಿವರ್ತನೆಯಾಗಿರುವುದಿಲ್ಲ

ಇ) ಸದರಿ ಬಡಾವಣೆಯಲ್ಲಿ 30x40, 30x50 ಮತ್ತು 40x60 ರ ಒಟ್ಟು 262 ನಿವೇಶನಗಳನ್ನು ರಚನೆ ಮಾಡಿರುತ್ತಾರೆ ಈ ಪೈಕಿ 199 ಅಂದರೆ 30x40ರ 166 ನಿವೇಶನಗಳು, 30x50 ರ 04 ನಿವೇಶನಗಳು ಮತ್ತು 40x 60ರ 29 ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ

ಈ) ಸಂಘವು ಸಂಘದ ಹೆಸರಿಗೆ ನೋಂದಣಿಯಾಗಿದ್ದ ಸರ್ವೆ ನಂ 34/7ರ 5 ಎಕರೆ 01 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಈ ಬಾಬ್ತು ರೂ 35 00 ಲಕ್ಷಗಳನ್ನು ಸಂಘವು ಪಡೆದಿರುತ್ತದೆ ಇದರ ಮಾರುಕಟ್ಟೆ ಬೆಲೆ ತಿಳಿದಿರುವುದಿಲ್ಲ

ಉ) ನಿವೇಶನ ಪಡೆಯುವಲ್ಲಿ ಸದಸ್ಯರು ವಂಚಿತರಾಗಿರುತ್ತಾರೆ

ಊ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಾನೂನುಗಳಲ್ಲಿ ಇದಕ್ಕೆ ಅವಕಾಶ ಇರುವುದಿಲ್ಲ

ಋ) ಈ ಬಗ್ಗೆ ಕ್ರಮ ಕೈಕೊಳ್ಳಲು ಶಾಸನಬದ್ಧ ವಿಚಾರಣೆ ನಡೆಸಿ ಜವಾಬ್ದಾರಿ ನಿಗದಿಪಡಿಸಿ ತದನಂತರ ಕ್ರಮ ಜರುಗಿಸಬೇಕಾಗಿದೆ ಶಾಸನಬದ್ಧ ವಿಚಾರಣೆಗೆ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

390 (496) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) . ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳು ಯಾವುದು,

ಆ) ಆಯ್ಕೆ ಮಾಡಿದ ಈ ಗ್ರಾಮಗಳಲ್ಲಿ ವಿದ್ಯುದೀಕರಣ ಕೆಲಸ ಪ್ರಾರಂಭವಾಗಿದೆಯೇ,

ಇ) ಹಾಗಿದ್ದಲ್ಲಿ ಈ ಗ್ರಾಮಗಳಿಗೆ ವಿದ್ಯುದೀಕರಣ ಸೌಲಭ್ಯ ಒದಗಿಸಲು ಸರಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಒಟ್ಟು 120 ಗ್ರಾಮ/ದಲಿತ ಬಡ್ತಿ/ಜನತಾಕಾಲೋನಿ/ಆಶ್ರಯ ಕಾಲೋನಿ ಗಳನ್ನು ವಿದ್ಯುದೀಕರಣ ಆಯ್ಕೆ ಮಾಡಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಆ) ಆಯ್ಕೆ ಮಾಡಿದ ಗ್ರಾಮಗಳ ವಿದ್ಯುದೀಕರಣ ಕೆಲಸವನ್ನು ಪ್ರಾರಂಭಿಸಬೇಕಾಗುತ್ತದೆ ಕಾಮಗಾರಿಗಳ ನಿರ್ವಹಣೆಗಾಗಿ ಈಗಾಗಲೇ ಟೆಂಡರ್ ಗಳನ್ನು ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ ಒಟ್ಟು ಗುತ್ತಿಗೆ ಆಧಾರದ ಮೇಲೆ ಈ ಕಾಮಗಾರಿಗಳನ್ನು ಅರ್ಹ ಗುತ್ತಿಗೆದಾರರಿಗೆ ಆದಷ್ಟು ಶೀಘ್ರಗತಿಯಲ್ಲಿ ವಹಿಸಲಾಗುವುದು

ಇ) –ಅದೇ–

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 496ಕ್ಕೆ

ಅನುಬಂಧ

ಗ್ರಾಮಗಳ ವಿವರ

ಕ್ರ.ಸಂ	ಹಳ್ಳಿಗಳ ಹೆಸರು	ಕ್ರ.ಸಂ	ಹಳ್ಳಿಗಳ ಹೆಸರು
1	ಅಕ್ಕಿಸಾಗರ	2	ದಾಸನಾಳ
3	ಮಳ್ಳಿಕೇರಿ	4	ಮುಗಳಿಹಾಳ
5	ಗೋವನಕೊಪ್ಪ (ಕೆ ಎಸ್)	6	ತವಳಗೇರಿ
7	ಕುರಬಗಟ್ಟಿ	8	ಕೊಡ್ಲಿವಾಡ
9	ಇಟ್ನಾಳ	10	ಕೊರಕೊಪ್ಪ
11	ಸತ್ತಿಗೇರಿ	12	ಗುಡಮಗೇರಿ
13	ಯರಗಣವಿ	14	ಮಾಡಮಗೇರಿ
15	ಕೊಟೂರ	16	ಶಿವಾಪುರ
17	ಹೊರಗುದ್ದಿ	18	ಕಡಬಿ
19	ಬೊಳಕಡಬಿ	20	ಯರಝುರವಿ
21	ಬೂದಿಗೊಪ್ಪ	22	ಯರಗಟ್ಟಿ
23	ಸೊಪ್ಪಡ್ಲ	24	ರೈನಾಪುರ
25	ಆಲದಕಟ್ಟಿ (ಕೆ ಎಮ್)	26	ನುಗ್ಗಾನಟ್ಟಿ
27	ತಲ್ಲೂರ	28	ಸೋಮಾಪುರ
29	ಜಾಲಿಕಟ್ಟಿ	30	ಜೀವಾಪುರ
31	ಶ್ರೀರಂಗಪುರ	32	ಬೆನಕಟ್ಟಿ
33	ಮದ್ದೂರ	34	ಮಬ್ಬನೂರ
35	ಚಿಕ್ಕಬೂದನೂರ	36	ಕುಟಿರನಟ್ಟಿ
37	ಹೀರೆಬೂದನೂರ	38	ಮಳಗಲಿ
39	ತಡಸಲೂರ	40	ಚಚಡಿ

41	ಗೋಂತಮಾರ	42	ಮುತವಾಡ
43	ಇಂಚಲ	44	ಹಾರುಗೊಪ್ಪ
45	ಹಲಕಿ	46	ಮಹಾತೇಶ ನಗರ
47	ಜಂಗಮ ಬುಡಕಗಟ್ಟಿ	48	ಶಿವನಗರ
49	ಮುರಗೋಡ	50	ರುದ್ರಾಪುರ
51	ಕಾರಿಮನಿ	52	ದುಂಡನಕೊಪ್ಪ
53	ಹೀರೆಕೊಪ್ಪ (ಕೆ ಎಮ್)	54	ಮರಕುಂಬಿ
55	ಚಿಕ್ಕೊಪ್ಪ (ಕೆ ಎಮ್)	56	ಹೊಸೂರ
57	ಸೊಲಗ	58	ಕಾಗಿಹಾಳ
59	ಮಾಟೋಳ್ಳಿ	60	ಇಂಗಳಗಿ
61	ಏಣಗಿ	62	ಸುತಗಟ್ಟಿ
63	ಹಿಟ್ಟಣಗಿ	64	ಕಾರಲಕಟ್ಟಿ
65	ವೆಂಕಟೇಶ ನಗರ	66	ಆಲದಕಟ್ಟು (ಕೆ ವಾಯ್)
67	ಬಡ್ಲಿ	68	ಕಾತ್ರಾಳ
69	ಕೆಂಚಲಾರಕೊಪ್ಪ	70	ಗುರ್ಲಹೊಸೂರ
71	ಶಿಂಗಾರಕೊಪ್ಪ	72	ಮುಗಳಿ
73	ಅಸುಂಡಿ	74	ಕರಿಕಟ್ಟಿ
75	ಕೆಂಚಲರಮನಹಾಳ	76	ಯಡಹಳ್ಳಿ
77	ಸಂಗ್ಯೇಶಕೊಪ್ಪ	78	ಚಿಕ್ಕ ಉಳ್ಳಿಗೇರಿ
79	ಇನಾಮಹೊಂಗಲ	80	ಹೀರೆ ಉಳ್ಳಿಗೇರಿ
81	ಸವದತ್ತಿ (ಗ್ರಾಮೀಣ)	82	ಯಡ್ರಾವಿ
83	ಬೆಟಸೂರು	84	ಉಗರಗೋಳ
85	ಹರಲಾಪುರ	86	ದುಗಬಾಳ
87	ಹೀರೆಕುಂಬಿ	88	ರೇಣುಕಾ ನಗರ
89	ಧಡೇರಕೊಪ್ಪ	90	ಹಂಚಿನಾಳ
91	ಮುನವಳ್ಳಿ	92	ತೆಗ್ಗಿಹಾಳ
93	ಜಕಬಾಳ	94	ಕಿಟದಾಳ
95	ಅರಟಗಲ	96	ಬಸರಗಿ (ಇನಾಮ)
97	ತರೆದಕೊಪ್ಪ	98	ಭಂಡಾರಹಳ್ಳಿ
99	ಹಳ್ಳೂರ	100	ಹೀರೂರ
101	ಶಿಂದೋಗಿ	102	ಒಟ್ಟಾಳ

103	ಗೊರವನಹಳ್ಳಿ	104	ಕುರವಿನಕೊಪ್ಪ
105	ರಾಮನಗರ	106	ಕಟಮಳ್ಳಿ
107	ಎಕ್ಕೇರಿ	108	ಗೊರಬಾಳ
109	ಬಸಿಡೊಣಿ	110	ಶಿರಸಂಗಿ
111	ಕಲ್ಲಾಪುರ	112	ಗೋವನಕೊಪ್ಪ (ಇನಾಮ)
113	ಹರಳಕಟ್ಟಿ	114	ಮನಿಕಟ್ಟಿ
115	ಹೂಲಿಕಟ್ಟಿ	116	ಹೂಲಿ
117	ಚಿಕ್ಕುಂಬಿ	118	ಚುಳಕಿ
119	ಕಾಗದಾಳ	120	ಆಚಮಟ್ಟಿ

391 (497) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ಪಟ್ಟಣದಲ್ಲಿ 220 ಕೆ ವಿ ವಿದ್ಯುತ್ ವಿತರಣಾ ಕೇಂದ್ರವನ್ನು ಮಂಜೂರಾಗಿದ್ದರೂ ಇಲ್ಲಿವರೆಗೆ ಕೆಲಸ ಪ್ರಾರಂಭವಾಗದೇ ಇರಲು ಕಾರಣವೇನು,

ಆ) ಈ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಜಮೀನು ಮಂಜೂರಾಗಿದೆಯೇ,

ಇ) ಹಾಗಿದ್ದಲ್ಲಿ ಜಮೀನು ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳಗಾವಿ ಜಿಲ್ಲೆ ಸವದತ್ತಿ ಪಟ್ಟಣಕ್ಕೆ ಮಂಜೂರಾಗಿರುವ 220 ಕೆ ವಿ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯನ್ನು ಕೈಗೊಳ್ಳಲು ಕೃಷಿ ಇಲಾಖೆಯ ಜಮೀನನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಗುರುತಿಸಿದ್ದು, ಕೃಷಿ ಇಲಾಖೆಯು ಭೂಮಿಯನ್ನು ಕನಾಟಕ ವಿದ್ಯುತ್ ಪ್ರಸರಣ ನಿಗಮದ ವಶಕ್ಕೆ ನೀಡಬೇಕಾಗಿರುತ್ತದೆ ಈ ಕಾರಣದಿಂದಾಗಿ, ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ

ಆ) ಕೃಷಿ ಇಲಾಖೆಯ ಬೀಜೋತ್ಪಾದನಾ ಕೇಂದ್ರದ ಕೃಷಿ ಕ್ಷೇತ್ರದ ಜಮೀನನ್ನು ಸದರಿ 220 ಕೆ ವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಗುರುತಿಸಲಾಗಿದ್ದು, ಕೃಷಿ ಇಲಾಖೆಯು ನಿರ್ಧರಿಸಿದ ಬೆಲೆಗೆ ಜಮೀನನ್ನು ಖರೀದಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಸಮ್ಮತಿಸಿರುತ್ತದೆ ಕೃಷಿ ಇಲಾಖೆಯಿಂದ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ